ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2341
ಸದಸ್ಯರ ಹೆಸರು	:	ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	21-03-2022
ಉತ್ತರಿಸುವ ಸಚಿವರು	:	ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕರ್ನಾಟಕ ಸರ್ಕಾರದಿಂದ ಜಿಲ್ಲಾ ಗೆಜೆಟಿಯರ್ ಹೊರಡಿಸುವ ಉದ್ದೇಶವೇನು, (ಸಂಪೂರ್ಣ ಮಾಹಿತಿ ಒದಗಿಸುವುದು)	ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯನ್ನು ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಕಟಿಸಿದ್ದ ಜಿಲ್ಲಾ ಗ್ಯಾಸೆಟಿಯರ್ ಗಳನ್ನು ಪರಿಷ್ಕರಿಸುವ ಕಾರ್ಯವನ್ನು ಮಾಡಲು ಮತ್ತು ಸ್ವಾತಂತ್ರ್ಯ ನಂತರದಲ್ಲಿ ಜಿಲ್ಲಾ ಗ್ಯಾಸೆಟಿಯರ್ ಗಳನ್ನು ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿರುವ ಪ್ರಗತಿಯನ್ನು ಕ್ರೋಢೀಕರಿಸಿ ಪ್ರಕಟಿಸುವ ಉದ್ದೇಶವನ್ನು ಹೊಂದಿದ್ದು, ಮಾಹಿತಿಯನ್ನು ಈ ಕೆಳಕಂಡಂತೆ ನೀಡಲಾಗಿದೆ. 1. ಪರಿಷ್ಕೃತ ಜಿಲ್ಲಾ ಗ್ಯಾಸೆಟಿಯರ್ ಸಂಪುಟಗಳ ಪ್ರಕಟಣೆ ಹಾಗೂ ರಾಜ್ಯ ಗ್ಯಾಸೆಟಿಯರ್ ಸಂಪುಟಗಳ ಪ್ರಕಟಣೆ (ಕನ್ನಡ ಹಾಗೂ ಇಂಗ್ಲೀಷ್) 2. ಕರ್ನಾಟಕ ಕೈಪಿಡಿಯ ಪರಿಷ್ಕೃತ ಆವೃತ್ತಿಯ ಪ್ರಕಟಣೆ (ಕನ್ನಡ ಹಾಗೂ ಇಂಗ್ಲೀಷ್) 3. ಕನ್ನಡ ಹಾಗೂ ಇಂಗ್ಲೀಷ್ ಆವೃತ್ತಿಗಳಲ್ಲಿ ತಾಲ್ಲೂಕು ಗ್ಯಾಸೆಟಿಯರ್‌ಗಳ ಸಂಪಾದನೆ ಹಾಗೂ ಪ್ರಕಟಣೆ. 4. ಪ್ರವಾಸೋದ್ಯಮ ಗ್ಯಾಸೆಟಿಯರ್, ಗ್ಲಿಂಪ್ಸಸ್ ಆಫ್ ಕರ್ನಾಟಕ (ಆಂಗ್ಲ), ಕರ್ನಾಟಕ ಮಿನುಗು ನೋಟ, ಜುವೆಲ್ಸ್ ಆಫ್ ಅಡ್ಮಿನಿಸ್ಟ್ರೇಷನ್, ಆಫ್ ಪ್ರಿನ್ಸಿಲಿ ಮೈಸೂರ್ ಸ್ಟೇಟ್, ಟಿಪ್ಪು ಸುಲ್ತಾನ್-ಎ ಕ್ರೂಸೆಡರ್ ಫಾರ್ ಚೇಂಜ್ ಅಂತಹ ಅಮೂಲ್ಯ ಗ್ರಂಥಗಳ ವಿಶೇಷ ಪ್ರಕಟಣೆಗಳು. 5. ಹಿಂದಿನ ಅಪರೂಪದ ಬಹು ಅಮೂಲ್ಯವಾದ ಗ್ಯಾಸೆಟಿಯರ್ ಗಳ ಸ್ಕ್ಯಾನಿಂಗ್ ಹಾಗೂ ಮರು ಮುದ್ರಣ ಕಾರ್ಯಗಳು. ಸರ್‌ಬುಕನನ್ ರವರ ರಚನೆಯಾದ ಎ ಜರ್ನಿ ಫ್ರಂ ಮದ್ರಾಸ್ ತ್ರೂ ದ ಕಂ ಟ್ರೀಸ್ ಆಫ್ ಮೈಸೂರ್, ಕೆನರಾ ಅಂಡ್ ಮಲಬಾರ್ (ಮರು ಮುದ್ರಣ ಮೂರು ಸಂಪುಟಗಳಲ್ಲಿ), ಇಂಪೀರಿಯಲ್ ಗ್ಯಾಸೆಟಿಯರ್ ಬೀದರ್, ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲಾ ಗ್ಯಾಸೆಟಿಯರ್, ಬಿ.ಎಲ್. ರೈಸ್ ಸಂಪಾದಿತ ಮೈಸೂರು ಮತ್ತು ಕೂರ್ಗ್ (3 ಸಂಪುಟಗಳು), ಮೈಸೂರು ಗ್ಯಾಸೆಟಿಯರ್ (ಹಯವದನ ರಾವ್ ಸಂಪಾದಿತ)-6 ಪುಸ್ತಕಗಳನ್ನು 5 ಸಂಪುಟಗಳಲ್ಲಿ ಪ್ರಕಟಿಸಲಾಗಿದೆ.

....2

ಆ)	ಜಿಲ್ಲೆಗಳಾಗಿ 10-15 ವರ್ಷಗಳೇ ಕಳೆದರೂ ಈವರೆಗೂ ಜಿಲ್ಲಾ ಗೆಜೆಟಿಯರ್ ಹೊರಡಿಸದೆ ಇರುವುದರ ಉದ್ದೇಶವೇನು; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; (ಮಾಹಿತಿ ಒದಗಿಸುವುದು).	ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯಲ್ಲಿ ಕಳೆದ 10-15 ವರ್ಷಗಳಲ್ಲಿ ಈ ಕೆಳಕಂಡ ಜಿಲ್ಲಾ/ತಾಲ್ಲೂಕು ಗ್ಯಾಸೆಟಿಯರ್‌ಗಳನ್ನು ಪ್ರಸಕಟಿಸಲು ಸರ್ಕಾರ ಕ್ರಮ ವಹಿಸಿದೆ. ಮಾಹಿತಿಯು ಈ ಕೆಳಕಂಡಂತಿರುತ್ತದೆ. 1. ಬಿಜಾಪುರ ಜಿಲ್ಲಾ ಗ್ಯಾಸೆಟಿಯರ್ (ಆಂಗ್ಲ)-2007 2. ಮಂಡ್ಯ ಜಿಲ್ಲಾ ಗ್ಯಾಸೆಟಿಯರ್ (ಆಂಗ್ಲ)-2006 3. ದಕ್ಷಿಣ ಕನ್ನಡ ಜಿಲ್ಲಾ ಗ್ಯಾಸೆಟಿಯರ್ (ಕನ್ನಡ)-2007 4. ಉಡುಪಿ ಜಿಲ್ಲಾ ಗ್ಯಾಸೆಟಿಯರ್ (ಕನ್ನಡ)-2010 5. ದಕ್ಷಿಣ ಕನ್ನಡ ಜಿಲ್ಲಾ ಗ್ಯಾಸೆಟಿಯರ್ (ಆಂಗ್ಲ)-2011 6. ಮೈಸೂರು ಜಿಲ್ಲೆಯ 07 ತಾಲ್ಲೂಕು ಗ್ಯಾಸೆಟಿಯರ್ ಸಂಪುಟಗಳು-2010 7. ಮೈಸೂರು ಗ್ಯಾಸೆಟಿಯರ್ -2012 8. ಇಂಪೀರಿಯಲ್ ಗ್ಯಾಸೆಟಿಯರ್-ಬೀದರ್, ಗುಲ್ಬರ್ಗಾ, ರಾಯಚೂರು ಜಿಲ್ಲಾ ಗ್ಯಾಸೆಟಿಯರ್-2012 9. ಕೋಲಾರ (ಆಂಗ್ಲ)-2012 10. ಉಡುಪಿ (ಆಂಗ್ಲ)-2012 11. ಚಾಮರಾಜನಗರ ಜಿಲ್ಲಾ ಗ್ಯಾಸೆಟಿಯರ್ (ಕನ್ನಡ)- 2015 12. ತುಮಕೂರು ಜಿಲ್ಲಾ ಗ್ಯಾಸೆಟಿಯರ್ (ಕನ್ನಡ)-2017 13. ಬೀದರ್ ಜಿಲ್ಲಾ ಗ್ಯಾಸೆಟಿಯರ್ (ಆಂಗ್ಲ) -2016 14. ಚಿತ್ರದುರ್ಗ ಜಿಲ್ಲೆಯ 3 ತಾಲ್ಲೂಕು ಗ್ಯಾಸೆಟಿಯರ್‌ಗಳು: 1) ಹೊಸದುರ್ಗ 2) ಹಿರಿಯೂರು 3) ಹೊಳಲ್ಕೆರೆ-2018 (ಕನ್ನಡ ಆವೃತ್ತಿ) 15. ದಾವಣಗೆರೆ ಜಿಲ್ಲೆಯ 3 ತಾಲ್ಲೂಕು ಗ್ಯಾಸೆಟಿಯರ್‌ಗಳು: 1) ದಾವಣಗೆರೆ 2) ಹರಿಹರ 3) ಹರಪ್ಪನ ಹಳ್ಳಿ- 2018 (ಕನ್ನಡ ಆವೃತ್ತಿ) ಪ್ರಸ್ತುತ ದಾವಣಗೆರೆ ಜಿಲ್ಲೆಯ ೧) ಚನ್ನಗಿರಿ, ೨) ಹೊನ್ನಾಳಿ ಮತ್ತು ೩) ಜಗಳೂರು ತಾಲ್ಲೂಕು ಗ್ಯಾಸೆಟಿಯರ್ ಹಾಗೂ ಕೊಪ್ಪಳ ಜಿಲ್ಲೆಯ ೧) ಯಲಬುರ್ಗಾ ೨) ಕುಷ್ಟಗಿ ೩) ಕೊಪ್ಪಳ ಮತ್ತು ೪) ಗಂಗಾವತಿ ತಾಲ್ಲೂಕು ಗ್ಯಾಸೆಟಿಯರ್ ಸೇರಿ ಒಟ್ಟು ಏಳು ತಾಲ್ಲೂಕು ಗ್ಯಾಸೆಟಿಯರ್‌ಗಳ ಪ್ರಕಟಣೆಗೆ ಸಂಬಂಧಿಸಿದಂತೆ 03 ತಾಲ್ಲೂಕು ಗ್ಯಾಸೆಟಿಯರ್‌ಗಳನ್ನು ಮುದ್ರಣಕ್ಕಾಗಿ ಸರ್ಕಾರಿ ಮುದ್ರಣಾಲಯಕ್ಕೆ ಕಳುಹಿಸಲಾಗಿದೆ ಹಾಗೂ ಉಳಿದ ತಾಲ್ಲೂಕು ಗ್ಯಾಸೆಟಿಯರ್‌ಗಳನ್ನು ಮುದ್ರಣಕ್ಕಾಗಿ ಸಿದ್ಧಪಡಿಸಲಾಗಿದೆ. ಕೋವಿಡ್-19ರ ಒಂದನೆ ಮತ್ತು ಎರಡನೇ ಅಲೆಯಲ್ಲಿ ಕರೋನಾ ಮಾರಣಾಂತಿಕ ಖಾಯಿಲೆಯಿಂದಾಗಿ, ಜಿಲ್ಲಾ/ತಾಲ್ಲೂಕು ಗ್ಯಾಸೆಟಿಯರ್‌ಗಳ ಹಲವು ಹೊರಗುತ್ತಿಗೆ ಲೇಖಕರು ಮರಣವನ್ನಪ್ಪಿದರು. ಅದಕ್ಕಾಗಿ ಅವರುಗಳು ರಚಿಸಿ ಕೊಡಬೇಕಾಗಿದ್ದ ಅಧ್ಯಾಯಗಳನ್ನು ಬೇರೆ ಹೊರಗುತ್ತಿಗೆ ಲೇಖಕರಿಗೆ ಮರುಹಂಚಿಕೆ ಮಾಡಲಾಗಿದೆ ಹಾಗೂ ಅಧ್ಯಾಯಗಳ ರಚನಾ ಕಾರ್ಯ ಪ್ರಗತಿಯಲ್ಲಿದೆ.

ಇ)	ಜಿಲ್ಲಾ ಗೆಜೆಟಿಯರ್ ತಯಾರು ಮಾಡಲು ಕೆಲವು ಜಿಲ್ಲೆಗಳಲ್ಲಿ ಮಾಹಿತಿ ಸಂಗ್ರಹಿಸಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆಗಳು ನಡೆದರೂ ಯಾವುದೇ ರೀತಿಯ ಕಾರ್ಯರೂಪಕ್ಕೆ ಬರದಿರಲು ಕಾರಣವೇನು? (ಮಾಹಿತಿ ಒದಗಿಸುವುದು)	ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯಲ್ಲಿ ಜಿಲ್ಲಾ ಗ್ಯಾಸೆಟಿಯರ್ ಗಳನ್ನು ಪ್ರಕಟಿಸಲು ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆಗಳನ್ನು ನಡೆಸುವ ಪರಂಪರೆಯನ್ನು ಇಲಾಖೆಯು ಹೊಂದಿರುವುದಿಲ್ಲ. ಆದರೆ ಇಲಾಖೆ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಲಹಾ ಸಮಿತಿ ಸಭೆಯನ್ನು ನಡೆಸಿ ಸಭಾ ನಡವಳಿಯಂತೆ ಗ್ಯಾಸೆಟಿಯರ್ ಪುಸ್ತಕಗಳನ್ನು ಪ್ರಕಟಿಸಲು ಕ್ರಮವಹಿಸಲಾಗುತ್ತದೆ.

ಸಂಖ್ಯೆ: ಕಸಂವಾ 45 ಕೆಓಎಲ್ ಆಕ 2022.

(ವಿ.ಸುನೀಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು